## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಎಂ.ಬಿ.ಮಂಕಣಿ, ಹಿಂದಿನ ಕಾರ್ಯದರ್ಶಿ, ಗ್ರಾಮ ಪಂಚಾಯತ್, ಗಂಜಿಹಾಳ ಮತ್ತು ಶ್ರೀ ಎಲ್.ಜಿ.ದಿವಟಗಿ, ಹಿಂದಿನ ಗ್ರಾಮ ಲೆಕ್ಕಿಗ, ಗಂಜಿಹಾಳ, ಇವರುಗಳ ಮೇಲೆ ಜಂಟಿ ಇಲಾಖಾ ವಿಚಾರಣೆಯಲ್ಲಿ ಜಿಲ್ಲಾಧಿಕಾರಿ, ಬಾಗಲಕೋಟೆ ರವರು ವಿಧಿಸಿದ್ದ ದಂಡನೆ ವಿರುದ್ಧ ಪ್ರಾದೇಶಿಕ ಆಯುಕ್ತರು, ಬೆಳಗಾವಿ, ಇವರು ಮೇಲ್ಮನವಿಯಲ್ಲಿ ದಿನಾಂಕ: 13.05.2010ರಂದು ಹೊರಡಿಸಿದ ಆದೇಶವನ್ನು ಕರ್ನಾಟಕ ನಾಗರೀಕ ಸೇವಾ(ವ.ನಿ.ಮೇ) ನಿಯಮಗಳು, 1957ರ ನಿಯಮ 26ರಡಿ ಪುನರಾಮರ್ಶಿಸುವ ಬಗ್ಗೆ.

**ಓದಲಾಗಿದೆ:**
1) ಜಿಲ್ಲಾಧಿಕಾರಿ, ಬಾಗಲಕೋಟೆ ರವರ ಆದೇಶ ಸಂಖ್ಯೆ: ಡಿಪಿಎ/ ಸಿಆರ್/17/08-09, ದಿನಾಂಕ 15.12.2009.
2) ಪ್ರಾದೇಶಿಕ ಆಯುಕ್ತರು, ಬೆಳಗಾವಿ ರವರ ಆದೇಶ ಸಂಖ್ಯೆ: ಪ್ರಾಆಬೆ: ಸಿಬ್ಬಂದಿ:3:ಅಪೀಲ:06-2009-10,ದಿನಾಂಕ 13.05.2010.
3) ಜಿಲ್ಲಾಧಿಕಾರಿಗಳು, ಬಾಗಲಕೋಟೆ, ಇವರ ಪತ್ರ ಸಂಖ್ಯೆ; ಕಂಶಾ/ ಡಿಪಿಇ/ಸಿಆರ್/17/2008-09, ದಿನಾಂಕ: 01.10.2012.
4) ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ, ಇವರ ಅರೆಸರ್ಕಾರಿ ಪತ್ರ ಸಂಖ್ಯೆ; ಸಿಬ್ಬಂದಿ-3/ಅಪೀಲು/ 06/2009-10, ದಿನಾಂಕ: 04.08.2012 ಮತ್ತು 28.02.2013.

**ಪ್ರಸ್ತಾವನೆ:**

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನಲ್ಲಿ ದಿನಾಂಕ: 17.09.2007 ರಿಂದ 19.09.2007 ರವರೆಗೆ ಸುರಿದ ಭಾರಿ ಮಳೆಯಿಂದಾಗಿ ಹಾಗೂ ಮಲಪ್ರಭಾ ನದಿ ಪ್ರವಾಹ ಹಿನ್ನೀರಿನಿಂದಾಗಿ ಗಂಜಿಹಾಳ ಗ್ರಾಮಕ್ಕೆ ನೀರು ನುಗ್ಗಿ ಮನೆಗಳು ಕುಸಿದು ಹಾನಿಯಾಗಿದ್ದು, ಈ ದಿಸೆಯಲ್ಲಿ ಪರಿಹಾರ ಧನ ಮಂಜೂರು ಮಾಡುವ ಕುರಿತು ಅರ್ಹ ಫಲಾನುಭವಿಗಳ ಸಮೀಕ್ಷೆ ಕಾರ್ಯಕ್ಕೆ ಶ್ರೀ ಎಲ್.ಜಿ.ದಿವಟಗಿ, ಗ್ರಾಮ ಲೆಕ್ಕಾಧಿಕಾರಿ, ಗಂಜಿಹಾಳ, ಶ್ರೀ ಎಂ.ಬಿ.ಮಂಕಣಿ, ಕಾರ್ಯದರ್ಶಿ, ಗ್ರಾಮ ಪಂಚಾಯಿತಿ, ಗಂಜಿಹಾಳ ಹಾಗೂ ಶ್ರೀ ವಿಜಯಕುಮಾರ್, ಕಿರಿಯ ಇಂಜಿನಿಯರ್, ಜಿಲ್ಲಾ ಪಂಚಾಯಿತಿ, ಹುನಗುಂದ, ಇವರುಗಳ ತಂಡವನ್ನು ರಚಿಸಲಾಗಿತ್ತು. ಫಲಾನುಭವಿಗಳ ಯಾದಿಯಲ್ಲಿ ಅನರ್ಹ ಫಲಾನುಭವಿಗಳನ್ನು ಸೇರಿಸಿ ಅರ್ಹ ಫಲಾನುಭವಿಗಳನ್ನು ಕೈಬಿಟ್ಟಿರುವುದಾಗಿ ದೂರು ಬಂದಿರುವುದನ್ನು ತಹಶೀಲ್ದಾರ ಹುನಗುಂದ, ಇವರು ಪರಿಶೀಲನೆ ಮಾಡಿ ಅನರ್ಹ ಫಲಾನುಭವಿಗಳನ್ನು ಯಾದಿಯಲ್ಲಿ ಸೇರಿಸಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವುದಾಗಿ ತಿಳಿಸಿದ್ದ ವರದಿಯ ಮೇಲೆ ಸದರಿ 3 ಸಿಬ್ಬಂದಿಯನ್ನು ಅಮಾನತ್ತಿನಲ್ಲಿರಿಸಲಾಗಿತ್ತು.

ತದನಂತರ ಶ್ರೀ ವಿಜಯಕುಮಾರ್, ಕಿರಿಯ ಇಂಜಿನಿಯರ್, ಇವರಿಗೆ ಸಂಬಂಧಿಸಿದಂತೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಬಾಗಲಕೋಟೆ ರವರ ಮುಖಾಂತರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬಾಗಲಕೋಟೆ ರವರು ಇಲಾಖಾ ವಿಚಾರಣೆ ನಡೆಸಿ ಅದರಲ್ಲಿ

ಅವರನ್ನು ದೋಷಮುಕ್ತರನ್ನಾಗಿ ಜನವರಿ-2009ರಲ್ಲಿ ಆದೇಶ ಹೊರಡಿಸಿದ್ದಾರೆ. ಇದೇ ಆಪಾದನೆಗಳ ಮೇಲೆ ಪ್ರತ್ಯೇಕ ಇಲಾಖಾ ವಿಚಾರಣೆಯನ್ನು ಶ್ರೀ ಎಲ್.ಜಿ.ದಿವಟಗಿ, ಗ್ರಾಮ ಲೆಕ್ಕಾಧಿಕಾರಿ ಹಾಗೂ ಶ್ರೀ ಎಂ.ಬಿ.ಮಂಕಣಿ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಇವರುಗಳ ವಿರುದ್ಧ ಜಿಲ್ಲಾಧಿಕಾರಿ, ಬಾಗಲಕೋಟೆ ರವರು ನಡೆಸಿದ್ದಾರೆ. ಈ ಇಲಾಖಾ ವಿಚಾರಣೆಯ ನಡಾವಳಿಗಳಲ್ಲಿ ಈ ಇಬ್ಬರು ನೌಕರರಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟ ರೂ.6,45000/-ನ್ನು ವಸೂಲು ಮಾಡುವುದರ ಜೊತೆಗೆ ಅವರ ಮುಂದಿನ 3 ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮವಾಗಿ ತಡೆ ಹಿಡಿಯುವ ದಂಡನೆಯನ್ನು ವಿಧಿಸಿ ಮೇಲೆ ಓದಲಾದ (1)ರಲ್ಲಿ ಆದೇಶ ಹೊರಡಿಸಿದ್ದಾರೆ.

ಮೇಲ್ಕಂಡ ಇಬ್ಬರು ನೌಕರರು ತಮ್ಮ ಮೇಲೆ ವಿಧಿಸಲಾದ ದಂಡನೆಯನ್ನು ಪ್ರಶ್ನಿಸಿ ಪ್ರಾದೇಶಿಕ ಆಯುಕ್ತರು, ಬೆಳಗಾವಿ ರವರಿಗೆ ಮೇಲ್ಮನವಿಯನ್ನು ಸಲ್ಲಿಸಿದ್ದರು. ಮೇಲೆ(2)ರಲ್ಲಿ ಓದಲಾದ ದಿನಾಂಕ: 13.05.2010ರಲ್ಲಿ ಪ್ರಾದೇಶಿಕ ಆಯುಕ್ತರು ಸದರಿ ಮೇಲ್ಮನವಿಯಲ್ಲಿ ಎಲ್ಲಾ ಮೂವರು ಸಿಬ್ಬಂದಿಯ ಮೇಲೆ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಬೇಕಿದ್ದು, ಇಲಾಖಾ ವಿಚಾರಣೆ ನಡೆಸಿ ಪ್ರತ್ಯೇಕ ನಿರ್ಣಯಗಳನ್ನು ತೆಗೆದುಕೊಂಡಿರುವ ಪ್ರಕರಣವನ್ನು ಜಂಟಿ ಇಲಾಖಾ ವಿಚಾರಣೆ ಪ್ರಾರಂಭಿಸಬೇಕೆಂದು ನಿರ್ದೇಶಿಸಿ ಜಿಲ್ಲಾಧಿಕಾರಿ, ಬಾಗಲಕೋಟೆ, ಇವರಿಗೆ ಪ್ರಕರಣವನ್ನು ಹಿಂತಿರುಗಿಸಿರುತ್ತಾರೆ.

ಈ ಬಗ್ಗೆ ಜಂಟಿ ಇಲಾಖಾ ವಿಚಾರಣೆ ನಡೆಸುವ ಕುರಿತಂತೆ ಜಿಲ್ಲಾಧಿಕಾರಿ, ಬೆಳಗಾವಿ ರವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ಅದನ್ನು ಪರಿಶೀಲಿಸಿದ ನಂತರ, ಶ್ರೀ ವಿಜಯಕುಮಾರ್, ಕಿರಿಯ ಇಂಜನಿಯರ್, ಇವರು ಮೂಲತಃ ದಿನಗೂಲಿ ಆಧಾರದ ಮೇಲೆ ನೇಮಕಗೊಂಡು ಜಿಲ್ಲಾ ಪಂಚಾಯಿತಿ ಸೇವೆಯಲ್ಲಿ ವಿಲೀನಗೊಂಡವರಾಗಿದ್ದು, ಇವರು ಸರ್ಕಾರಿ ನೌಕರರಾಗಿರುವುದಿಲ್ಲ. ಆದಕಾರಣ ಇವರ ವಿಷಯದಲ್ಲಿ ಕೆ.ಸಿ.ಎಸ್.ಆರ್.(ಸಿಸಿಎ) ನಿಯಮಗಳು ವಾಸ್ತವವಾಗಿ ಅನ್ವಯವಾಗದಿದ್ದರೂ ಸಹ, ಪ್ರತ್ಯೇಕವಾಗಿ ಇಲಾಖಾ ವಿಚಾರಣೆ ನಡೆಸಿ ತೆಗೆದುಕೊಂಡಿರುವ ಕ್ರಮವು ನಿಯಮಾನುಸಾರ ಇದೆ. ಆದುದರಿಂದ, ಜಂಟಿ ಇಲಾಖಾ ವಿಚಾರಣೆ ನಡೆಸುವ ಕುರಿತಂತೆ ಈ ಪ್ರಕರಣದಲ್ಲಿ ಜಿಲ್ಲಾಧಿಕಾರಿ, ಬಾಗಲಕೋಟೆ ರವರಿಂದ ಸ್ವೀಕರಿಸಿದ ಪ್ರಸ್ತಾವನೆಗಳನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಿ ಸಿ.ಮತ್ತು ಆ.ಸು.ಇಲಾಖೆ (ಸೇವಾ ನಿಯಮಗಳು)ರವರ ಅಭಿಪ್ರಾಯವನ್ನೂ ಸಹ ಪಡೆದು ಜಂಟಿ ಇಲಾಖಾ ವಿಚಾರಣೆ ನಡೆಸಲು ಅವಕಾಶ ಇಲ್ಲವೆಂದು ತಿಳಿಸಲಾಗಿದೆ.

ಆದಾಗ್ಯೂ, ಮೇಲೆ(3)ರಲ್ಲಿ ಓದಲಾದ ಪತ್ರದಲ್ಲಿ ಜಿಲ್ಲಾಧಿಕಾರಿ, ಬಾಗಲಕೋಟೆ ರವರು ಈ ಪ್ರಕರಣದಲ್ಲಿ ಜಂಟಿ ಇಲಾಖಾ ವಿಚಾರಣೆ ನಡೆಸಲು ಸರ್ಕಾರದ ಆದೇಶ ಕೋರಿದ್ದಾರೆ. ಮುಂದುವರೆದು, ಮೇಲೆ(4)ರಲ್ಲಿ ಓದಲಾದ ಪ್ರಸ್ತಾವನೆಗಳಲ್ಲಿ ಪ್ರಾದೇಶಿಕ ಆಯುಕ್ತರು, ಬೆಳಗಾವಿ, ಇವರು ಈ ಪ್ರಕರಣದಲ್ಲಿ ಕೆ.ಸಿ.ಎಸ್.(ಸಿಸಿಎ) ನಿಯಮಗಳು, 1957ರ ನಿಯಮ 26ರಡಿ ಸರ್ಕಾರವು ಪರಾಮರ್ಶಿಸಿ ಆದೇಶ ಹೊರಡಿಸಲು ಕೋರಿದ್ದಾರೆ. ಮೇಲ್ಕಂಡ ಹಿನ್ನಲೆಯಲ್ಲಿ ಸರ್ಕಾರವು ಈ ಬಗ್ಗೆ ಪರಾಮರ್ಶಿಸಿದೆ. ಶ್ರೀ ವಿಜಯಕುಮಾರ್ ರವರು ಸೇರಿದಂತೆ ಎಲ್ಲಾ ಮೂವರು ನೌಕರರ ಮೇಲೆ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು ನಿಯಮಗಳಲ್ಲಿ ಆಸ್ಪದವಿರುವುದಿಲ್ಲ. ಆದುದರಿಂದ ಪ್ರಾದೇಶಿಕ ಆಯುಕ್ತರು, ಬೆಳಗಾವಿ ರವರು ಈ ಪ್ರಕರಣವನ್ನು ಜಿಲ್ಲಾಧಿಕಾರಿಯವರಿಗೆ ವಾಪಸ್ಸು ನೀಡಿ ಜಂಟಿ ಇಲಾಖಾ ವಿಚಾರಣೆ ನಡೆಸಬೇಕೆಂದು ದಿನಾಂಕ

13.05.2010ರಂದು ನೀಡಿರುವ ಆದೇಶ ಒಂದು ರೀತಿಯ ಅನುಷ್ಠಾನಗೊಳಿಸಲಾಗದ ಆದೇಶವಾಗಿ ಪರಿಣಮಿಸಿದೆ.

ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳು 1957ರ ನಿಯಮ 26ರಡಿಯಲ್ಲಿ ಯಾವುದೇ ಶಿಸ್ತು ಪ್ರಕರಣಕ್ಕೆ ಸಂಬಂಧಿಸಿದಂತೆ ಹೊಸ ಸಾಕ್ಷ್ಯಾಧಾರ ದೊರೆತಿದ್ದು, ಈ ಹಿಂದೆ ವಿಚಾರಣೆ ಸಮಯದಲ್ಲಿ ಅದನ್ನು ಪರಿಗಣಿಸದೇ ಇದ್ದಲ್ಲಿ; ಅಥವಾ ಯಾವುದಾದರೂ ದಂಡನೆಯನ್ನು ವಿಧಿಸಲು ಆದೇಶಿಸಿದ್ದು, ಆ ದಂಡನೆಯನ್ನು ಅನುಷ್ಠಾನಗೊಳಿಸಲಾಗದಿರುವಂತಹ ಪರಿಸ್ಥಿತಿ ಉಂಟಾದಲ್ಲಿ; ಸರ್ಕಾರವು ಪ್ರಕರಣವನ್ನು ಪರಾಮರ್ಶಿಸಿ ಈಗಾಗಲೇ ನೀಡಿರುವ ಆದೇಶವನ್ನು ದೃಢೀಕರಿಸುವುದು ಅಥವಾ ಮಾರ್ಪಡಿಸುವುದು ಅಥವಾ ವಜಾಗೊಳಿಸುವುದು ಅಥವಾ ಪ್ರಕರಣವನ್ನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಮರು ಪರಿಗಣನೆಗೆ ನಿರ್ದೇಶನ ನೀಡುವ ಮೂಲಕ ಹಿಂತಿರುಗಿಸುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಈಗಾಗಲೇ ತಿಳಿಸಿದಂತೆ ಬೆಳಗಾವಿ ಪ್ರಾದೇಶಿಕ ಆಯುಕ್ತರು ಈ ಪ್ರಕರಣವನ್ನು ಜಿಲ್ಲಾಧಿಕಾರಿಯವರಿಗೆ ಹಿಂತಿರುಗಿಸಿ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಬೇಕೆಂದು ನಿರ್ದೇಶಿಸಿರುವುದನ್ನು ಅನುಷ್ಠಾನಗೊಳಿಸಲು ಸಾಧ್ಯವಿಲ್ಲದಿರುವಂತಹ ಪರಿಸ್ಥಿತಿ ಉಂಟಾಗಿರುತ್ತದೆ. ಆದುದರಿಂದ ಸರ್ಕಾರವು ಕೆ.ಸಿ.ಎಸ್.(ಸಿಸಿಎ) ನಿಯಮಗಳು, 1957ರ ನಿಯಮ 26ರನ್ವಯ ಈ ಪ್ರಕರಣವನ್ನು ಪುನರಾಮರ್ಶಿಸಿ ಶ್ರೀ ಎಲ್.ಜಿ.ದಿವಟಗಿ, ಮತ್ತು ಶ್ರೀ ಎಂ.ಬಿ.ಮಂಕಣಿ ರವರುಗಳ ವಿರುದ್ಧ ಜಿಲ್ಲಾ ಜಿಲ್ಲಾಧಿಕಾರಿಯವರು ವಿಧಿಸಿರುವ ದಂಡನೆಯ ವಿರುದ್ಧ ಸಲ್ಲಿಸಲಾಗಿದ್ದ ಮೇಲ್ಮನವಿಯಲ್ಲಿ ಪ್ರಾದೇಶಿಕ ಆಯುಕ್ತರು, ಬೆಳಗಾವಿ ರವರು ದಿನಾಂಕ: 13.05.2010ರಂದು ಹೊರಡಿಸಿರುವ ಆದೇಶವನ್ನು ರದ್ದುಪಡಿಸಿ, ಸದರಿ ಮೇಲ್ಮನವಿಯನ್ನು ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಕರಣವನ್ನು ಪ್ರಾದೇಶಿಕ ಆಯುಕ್ತರಿಗೆ ಹಿಂತಿರುಗಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 18 ಇಎನ್‌ಕ್ಯೂ 2010**
**ಬೆಂಗಳೂರು, ದಿನಾಂಕ 28.03.2013.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಕರ್ನಾಟಕ ನಾಗರೀಕ ಸೇವಾ(ವ.ನಿ.ಮೇ) ನಿಯಮಗಳು, 1957ರ ನಿಯಮ 26ರಡಿ ಪರಾಮರ್ಶಿಸಿ, ಪ್ರಾದೇಶಿಕ ಆಯುಕ್ತರು, ಬೆಳಗಾವಿ ರವರು ಶ್ರೀ ಎಲ್.ಜಿ.ದಿವಟಗಿ, ಹಿಂದಿನ ಗ್ರಾಮ ಲೆಕ್ಕಿಗ, ಗಂಜೀಹಾಳ, ಹುನಗುಂದ ತಾಲ್ಲೂಕು ಹಾಗೂ ಶ್ರೀ ಎಂ.ಬಿ.ಮಂಕಣಿ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಗಂಜಿಹಾಳ, ಇವರ ವಿರುದ್ಧದ ಶಿಸ್ತು ಕ್ರಮದ ಮೇಲ್ಮನವಿಯಲ್ಲಿ ಆದೇಶ ಸಂಖ್ಯೆ: ಪ್ರಾಆಬೆ/ಸಿಬ್ಬಂದಿ-3/ ಅಪೀಲ/ 06/2009-10 ದಿನಾಂಕ: 13.05.2010ರಲ್ಲಿ ಹೊರಡಿಸಿರುವ ಆದೇಶವನ್ನು ಈ

ಮೂಲಕ ರದ್ದುಪಡಿಸಿದೆ. ಮುಂದುವರೆದು, ಸದರಿ ಮೇಲ್ಮನವಿ ಪ್ರಕರಣವನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಬೇಕೆಂದು ಪ್ರಾದೇಶಿಕ ಆಯುಕ್ತರು, ಬೆಳಗಾವಿ, ರವರಿಗೆ ಪ್ರಕರಣವನ್ನು ಹಿಂತಿರುಗಿಸಿ (remitted back) ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್.ಸಿ.ರಾಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
2) ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ / ಸಣ್ಣ ನೀರಾವರಿ ಇಲಾಖೆ.
3) ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ.
4) ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ.
5) ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ರಿಸಾಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು.
6) ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ., ರಾಜಕುಮಾರ್ ರಸ್ತೆ, ರಾಜಾಜಿನಗರ 1 ನೇ ಬ್ಲಾಕ್, ಬೆಂಗಳೂರು.
7) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
8) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬಾಗಲಕೋಟೆ.
9) ಸಂಬಂಧಪಟ್ಟ ನೌಕರರಿಗೆ – ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬಾಗಲಕೋಟೆ ರವರ ಮುಖಾಂತರ.
10) ಗ್ರಾ.ಅ.ಪಂ.ರಾಜ್ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ (ಪಂ.ರಾಜ್)/ ಅಪರ ಕಾರ್ಯದರ್ಶಿ ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
11) ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ, ಇವರಿಗೆ ವೆಬ್ ಸೈಟ್ ನಲ್ಲಿ ಪ್ರಕಟಿಸುವ ಸಲುವಾಗಿ.
12) ರಕ್ಷಾ ಕಡತ / ಮಾಹಿತಿ ಕೇಂದ್ರ / ಹೆಚ್ಚುವರಿ ಪ್ರತಿಗಳು.